**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ**
**ದಂಡಾಧಿಕಾರಿಗಳ ನ್ಯಾಯಾಲಯ, ದಾಂಡೇಲಿ.**

**O. S No. 214 /2017**

**ಪ್ರಾ.ಸಾ- 02**

**ದಿನಾಂಕಃ 11-06-2025 ರಂದು ಸತ್ಯ ಪ್ರತಿಜ್ಞೆ ಮೇಲೆ ಸಾಕ್ಷಿಗೆ ಪ್ರಮಾಣ ವಚನವನ್ನು ಭೋಧಿಸಲಾಯಿತು .**

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀಶೈಲ ತಂಃ ಗುರುಲಿಂಗಪ್ಪ ಬಿರಾದಾರ್ |
| ವಯಸ್ಸು | : | 75 ವರ್ಷ, |
| ಉದ್ಯೋಗ | : | ನಿವೃತ್ತ ಖಾಸಗಿ ನೌಕರರು |
| ವಾಸ | : | ದಾಂಡೇಲಿ. |

**<u>ಮುಖ್ಯ ವಿಚಾರಣೆ : ವಾದಿ ಪರ ಶ್ರೀ. ಎಮ್.ಸಿ. ಎಚ್ ವಕೀಲರಿಂದ.</u>**

1. ನನಗೆ ಪ್ರತಿವಾದಿ ವಿಶ್ವನಾಥರ ಪರಿಚಯ ಇದೆ. ನನಗೆ ವಾದಿಯ ಪರಿಚಯವೂ ಇದೆ. ವಾದಿ ಮತ್ತು ಪ್ರತಿವಾದಿ ವಿಶ್ವನಾಥರವರ ನಡುವೆ ಒಂದು ಮನೆಯ ಖರೀದಿ ವಿಚಾರವಾಗಿ ಅಂದಾಜು 1989 ರಲ್ಲಿ ವ್ಯವಹಾರವಾಗಿದ್ದು, ಸದರಿ ವ್ಯವಹಾರಕ್ಕೆ ನಾನು ಸಾಕ್ಷಿದಾರರಾಗಿ ಸಹಿ ಮಾಡಿರುತ್ತೇನೆ.

2. ಸಾಕ್ಷಿಗೆ ಈ ಹಂತದಲ್ಲಿ ನಿಪಿ 1 ನ್ನು ತೋರಿಸಲಾಯಿತು. ಸಾಕ್ಷಿ ನಿಪಿ 1 ರಲ್ಲಿ ನಿಪಿ 1 ಡಿ ಎಂದು ಗುರುತಿಸಿದ ಸಹಿಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದಾಖಲೆ ಪ್ರತಿವಾದಿ ವಿಶ್ವನಾಥರು ವಾದಿ ಲಲಿತಾರವರಿಗೆ ಮನೆ ಮಾರಾಟ ಮಾಡಿದ ದಾಖಲೆಯಾಗಿದ್ದು, ವಿಶ್ವನಾಥರೇ ನನ್ನನ್ನು ಸಾಕ್ಷಿದಾರೆಂದು ಸಹಿ ಮಾಡಲು ಕೋರಿ ಕೊಂಡಿದ್ದರಿಂದ, ನಾನು ಸದರಿ ದಾಖಲೆಗೆ ಸಾಕ್ಷಿದಾರರೆಂದು ಸಹಿ ಮಾಡಿರುತ್ತೇನೆ. ನಾನು ಸದರಿ ದಾಖಲೆಗೆ ಸೌದಾಗಾರವರ ಕಚೇರಿಯಲ್ಲಿ ನನ್ನ ಜೊತೆ ಇನ್ನು 5 ಜನ ಸಾಕ್ಷಿದಾರರೆಂದು ಸಹಿ ಮಾಡಿರುತ್ತೇವೆ. ಗೋಪಾಲರವರ ಹೆಸರು ಮಾತ್ರ ನನಗೆ ನೆನಪು ಇದೆ. ಸದರಿ ದಾಖಲೆಗೆ ಪ್ರತಿವಾದಿ ವಿಶ್ವನಾಥರವರ ಹೆಂಡತಿ ಉಮಾ ಮತ್ತು ಮಗ ವಿನಾಯಕ ಸಹ ಸಹಿ ಮಾಡಿರುತ್ತಾರೆ.

3. ನಿಪಿ 1 ಕ್ಕೆ ನಾನು ಸಹಿ ಮಾಡಿದ ದಿನ ವಾದಿ 19,000/- ರೂಪಾಯಿಗಳನ್ನು ಪ್ರತಿವಾದಿ ವಿಶ್ವನಾಥರಿಗೆ ನೀಡಿರುತ್ತಾರೆ. ಅದಕ್ಕೂ ಮುನ್ನ ವಾದಿ 14,000/- ರೂಗಳನ್ನು ಮುಂಗಡವಾಗಿ ವಿಶ್ವನಾಥರವರಿಗೆ ನೀಡಿದ್ದರೂ ಎಂದು ನನಗೆ ಗೊತ್ತಾಯಿತು. ಉಳಿದ 4,000/- ರೂ ಗಳನ್ನು ಕಾಗದ ಪತ್ರಗಳನ್ನು ಮಾಡಿದ ನಂತರ ನೀಡಬೇಕಾಗಿ ಠಾರಾಯಿಸಲಾಯಿತು. ಸದರಿ ದಾಖಲೆಯನ್ನು ತೊರಣಗಟ್ಟಿ ವಕೀಲರು ಹೇಳಿದಂತೆ ಇನಾಂದವರವರು ಬರೆದಿರುತ್ತಾರೆ.

**<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ವಿ.ಆರ್.ಎಚ್ . ವಕೀಲರಿಂದ.</u>**

(ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.)

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ. ಸರಿ ಇದೆ**

**Sd/-**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು,**
**ದಾಂಡೇಲಿ..**